## ಚಿತ್ರದುರ್ಗ ಡಿವಿಜ್.

### ನೋಟಿಸ್.

ತಾರೀಖು 27ನೆ ಜನವರಿ 1904.

ಚಿತ್ರದುರ್ಗ ಡಿವೀಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ಟ್ಯಾಸ್ಕ್ ವರ್ಕ್ಸ್ ವೆಂಕಟರಾವು ಎಂಬುವರಿಗೆ ಸೇಲಂ–ಬಳ್ಳಾರಿ ರೋಡ್ ರಿಪೇರಿ ಮಾಡಿದ್ದರ ಬಾಬತು ಪಾವತಿ ಆಗಬೇಕಾಗಿರುವ ರೂಪಾಯಿ 10—12—1ಪೈ ಬಾ॥ ನಿಂತಿರುತ್ತೆ. ಈ ತಾರೀಖು ಲಾಗಾಯತು 3 ತಿಂಗಳೊಳಗಾಗಿ ಮೇಲ್ಕಂಡ ಟ್ಯಾಸ್ಕ್ ವರ್ಕ್ಸ್ ಆಗಲಿ ಅಥವಾ ಅವರ ಸರಿಯಾದ ವಾರಸ್ದಾರರೆ ಆಗಲಿ ಚಿತ್ರದುರ್ಗ ಡಿವೀಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ರೂಬರೂಬು ಹಾಜರಾಗಿ ಪಣಾ ತೆಗದುಕೊಳ್ಳತಕ್ಕದ್ದು ತಪ್ಪಿದಲ್ಲಿ ಮೊಬಲಗು ಸರಕಾರಕ್ಕೆ ಜಮಾ ಮಾಡಿಕೊಳ್ಳಲ್ಪಡುತ್ತೆ.

ವೈ. ಶ್ರೀನಿವಾಸರಾವ್,
ಎಗ್ಜಿಕ್ಯೂಟಿವ್ ಇಂಜನಿಯರ್.

## ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

### ನೋಟಿಸ್.

ತಾರೀಖು 3ನೆ ಫೆಬ್ರುವರಿ 1904ನೆ ಇಸವಿ.

ಮೈಸೂರು ಗೌರ್ನಮೆಂಟ್ 30—11—1903ನೆ ನಂಬ್ರ ಸಂ 2029—30—L. F. 161–92ನೆ ನಂಬರು ಪ್ರೊಸಿಡಿಂಗ್ಸಿನಲ್ಲಿ ಮಂಜೂರು ಮಾಡಿರುವ ಮೇರೆಗೆ ಮೈಸೂರು ಪಟ್ಟಣದಲ್ಲಿ ಮನೆಗಳ ಕಟ್ಟಡಗಳ ಮತ್ತು ಖಾಲಿ ಜಾಗಗಳಿಗೆ ಹಾಲಿ ದಾಖಲಾಗಿ ಇರತಕ್ಕ ಸಾಲೀಯಾನಾ ಬಾಡಿಗೆ ರಿವಾಜು ಅಳತೆ ಮತ್ತು ಕಂದಾಯವನ್ನು ಇಬ್ಬರು ಕಮಿಷ್ನರುಗಳ ಸಹಾಯದೊಂದಿಗೆ ಮೈಸೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರಸಿಡೆಂಟರವರು ಇರೇಬಿಯಲ್ಲಿ ಕಾಣಿಸಿರುವ ಮೊಹಲಾಗಳ ಪಕ್ಕದಲ್ಲಿ ನಮೂದಿಸಿರುವ ವಾರಗಳಲ್ಲಿ ರೀ ರಿವಿಜ್ಯಾನೆ ಪುನರ್ವಿಮರ್ಶೆ ಮಾಡಲು ದಾ॥ರಂಭಿಸುತ್ತಾರಾದ್ದು–ಮೈಸೂರು ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 73ನೆ ಸೆಕ್ಷನ್ ಅನುಸರಿಸಿ ಸಮಸ್ತರಿಗೂ ಈ ಮೂಲಕ ತಿಳಿಯಪಡಿಸಿದೆ.

1. ಮಂಡಿಮೊಹಲಾ 1904ನೆ ಮಾರ್ಚಿ 3ನೆ ಗುರುವಾರದ ಲಾಗಾಯಿತು ಈ ಮೊಹಲಾ ಪೂರ್ತಿಯಾಗುವ ವರಿಗೆ ಎಲ್ಲಾ ಗುರುವಾರಗಳಲ್ಲಿಯೂ
2. ನಜರುಬಾದುಮೊಹಲಾ 1904ನೆ ಮಾರ್ಚಿ 4ನೆ ಶುಕ್ರವಾರದ ಲಾಗಾಯಿತು ಈ ಮೊಹಲಾ ಪೂರ್ತಿಯಾಗುವ ವರಿಗೆ ಎಲ್ಲಾ ಶುಕ್ರವಾರಗಳಲ್ಲಿಯೂ.
3. ದೇವರಾಜಮೊಹಲಾ 1904ನೆ ಮಾರ್ಚಿ 5ನೆ ಶನಿವಾರದ ಲಾಗಾಯಿತು ಡಿಟೋ
4. ಕಿಲ್ಲೆ ಮೊಹಲಾ 1904ನೆ ಮಾರ್ಚಿ 6ನೆ ಭಾನುವಾರದ ಲಾಗಾಯಿತು ಡಿಟೋ
5. ಲಷ್ಕರ್‌ಮೊಹಲಾ 1904ನೆ ಮಾರ್ಚಿ 8ನೆ ಮಂಗಳವಾರದ ಲಾಗಾಯಿತು ಡಿಟೋ
6. ಕೃಷ್ಣರಾಜಮೊಹಲಾ } 1904ನೆ ಮಾರ್ಚಿ 9ನೆ ಬುಧವಾರದ ಲಾಗಾಯಿತು ಈ
7. ಚಾಮರಾಜಮೊಹಲಾ } ಮೊಹಲಾ ಪೂರ್ತಿಯಾಗುವ ವರಿಗೆ ಎಲ್ಲಾ ಶುಕ್ರವಾರಗಳಲ್ಲಿಯೂ.

2. ಮೊಹತರ್ಫಾ ಕಂದಾಯಗಳು ಅಂದರೆ–ಅಂಗಡಿ ಗಾಣಾ ಮತ್ತು ಗಾಡಿಗಳಮೇಲಿನ ಕಂದಾಯವನ್ನು ಲೇಟ್ ಚೀಫ್ ಕಮಿಷನರ್ ಸಾಹೇಬರವರ 28—9—1860ನೆ ನಂಬ್ರ ಅಫಿಷಿಯಲ್ ಮಿಮೋರಾಂಡಂನಲ್ಲಿ ನಮೂದಿರುವ ತಪಶೀಲು ಮೇರಿಗೆ ರೀ ರಿವಿಜ್ಯಾನೆ ಪುನರ್ವಿಮರ್ಶೆ ಮಾಡಲ್ಪಡುವದು.

ಕೆ. ಶ್ರೀನಿವಾಸರಾವ್,
ವೈಸ್ ಪ್ರೆಸಿಡೆಂಟ್.